ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue 4, January- February 2025, Pp. 1-6**
**©*IIMRD*, Mysuru**

IIMRD JOURNALS

**www.iimrd.com**

# ಚಂದ್ರಗಿರಿ ತೀರದಲ್ಲಿ ಕಾದಂಬರಿಯಲ್ಲಿನ ಸ್ತ್ರೀ ಸಂವೇದನೆ

**ಪ್ರೊ. ಜಯಶ್ರೀ ಯ. ಮುಗಳಿ**
ದ. ಮ. ಶಿ. ಮಂಡಳದ ಬಾವುರಾವ ಕಾಕತಕರ್ ಮಹಾವಿದ್ಯಾಲಯ, ಬೆಳಗಾವಿ.

**ಸಾರಾಂಶ: (Abstract)**

*ಎಂಬತ್ತರ ದಶಕದ ಸಂದರ್ಭದಲ್ಲಿ ಇಸ್ಲಾಂ ಧರ್ಮ, ಮುಸ್ಲಿಂ ಸಂಸ್ಕೃತಿಯ ಗಾಢವಾದ ಅನುಭವ, ಸಂವೇದನೆಗಳನ್ನು ಅಪರಿಚಿತ ಲೋಕಕ್ಕೆ ಪರಿಚಯಿಸುವಲ್ಲಿ ಮತ್ತು ಹೊಸ ಸಂಸ್ಕೃತಿಯ ಅಧ್ಯಯನಕ್ಕೆ ನಾಂದಿ ಹಾಡುವಲ್ಲಿ ಹಲವಾರು ಮುಸ್ಲಿಂ ಸಾಹಿತಿಗಳು ಕೊಡುಗೆಯನ್ನು ನೀಡಿದ್ದಾರೆ. ಈ ಸಾಲಿನಲ್ಲಿ ಪ್ರಥಮ ಮಹಿಳಾ ಪ್ರತಿನಿಧಿಯಾಗಿ ಬರೆಯಲು ತೊಡಗಿದ ಶ್ರೀಮತಿ ಸಾರಾ ಅಬೂಬಕ್ಕರ್ ಅವರು ಕಾದಂಬರಿ ಕ್ಷೇತ್ರದ ಮೂಲಕ ಅತ್ಯುತ್ತಮ ಕೊಡುಗೆಯನ್ನು ನೀಡಿದ್ದಾರೆ. 1984ರಲ್ಲಿ ಅವರ ಚಂದ್ರಗಿರಿಯ ತೀರದಲ್ಲಿ ಮೊದಲ ಕಾದಂಬರಿಯು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಅಲಂಕರಿಸಿ ಸಾರಾ ಅವರನ್ನು ಪರಿಚಯಿಸಿತು.*

**ಮುಖ್ಯಪದಗಳು (Keywords):** ಚಂದ್ರಗಿರಿಯ ತೀರದಲ್ಲಿ, ಸಾರಾ ಅಬೂಬಕ್ಕರ್, ಸ್ತ್ರೀ ಸಂವೇದನೆ, ನಾದಿರಾ, ರಶೀದ್.

**ಪೀಠಿಕೆ**

ಸಾರಾ ಅಬೂಕ್ಕರ್‌ರವರು ಜೂನ್ 30, 1936ರಂದು ಕಾಸರಗೂಡಿನ ಚಂದ್ರಗಿರಿ ತೀರದ ಗ್ರಾಮದೊಂದರಲ್ಲಿ ಜನಿಸಿದರು. ತಂದೆ ನ್ಯಾಯವಾದಿಗಳಾಗಿದ್ದ ಪಿ. ಅಹಮದ್ ಮತ್ತು ತಾಯಿ ಜೈನಾಬಿ ಅವರು ಸಾರಾ ಅವರ ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟಿದೂರಿನಲ್ಲಿ ನೆರವೇರಿತು. ಮುಂದೆ ಅವರು ಹೈಸ್ಕೂಲಿನವರೆಗೆ ಕಲಿತಿದ್ದು ಕಾಸರಗೂಡಿನಲ್ಲಿ. ಅರೇಬಿಕ್ ಕಲೆತಿದ್ದ ಅಜ್ಜಿ ಹೇಳುತ್ತಿದ್ದ ಕತೆಗಳಿಂದ ಆಕರ್ಷಿತರಾಗಿ ಸಾಹಿತ್ಯದಲ್ಲಿ ಏನಾದರೂ ಸಾಧಿಸಬೇಕೆಂಬ ಆಶಯ ಅವರ ಬಾಲ್ಯದಲ್ಲಿ ಮೂಡಿಬಂದಿತು. ಇಂಜನಿಯರ್ ಆಗಿ ನೌಕರಿಯಲ್ಲಿದ್ದ ಅಬೂಬಕ್ಕರ್ ಅವರನ್ನು ಸಾರಾ ಅವರು ವಿವಾಹವಾದರು. ಓದಿನಲ್ಲಿ ನಿರಂತರ ಆಸಕ್ತರಾಗಿದ್ದ ಸಾರಾ ಅವರು ಮನೋವಿಜ್ಞಾನವನ್ನು ಆಧರಿಸಿ ಬರೆದ ತ್ರಿವೇಣಿಯವರ ಕಾದಂಬರಿಗಳು ಅವರಲ್ಲಿ ಆಕರ್ಷಣೆ ಹುಟ್ಟಿಸಿದವು.

ಎಂಬತ್ತರ ದಶಕದ ಸಂದರ್ಭದಲ್ಲಿ ಇಸ್ಲಾಂ ಧರ್ಮ, ಮುಸ್ಲಿಂ ಸಂಸ್ಕೃತಿಯ ಗಾಢವಾದ ಅನುಭವ, ಸಂವೇದನೆಗಳನ್ನು ಅಪರಿಚಿತ ಲೋಕಕ್ಕೆ ಪರಿಚಯಿಸುವಲ್ಲಿ ಮತ್ತು ಹೊಸ ಸಂಸ್ಕೃತಿಯ ಅಧ್ಯಯನಕ್ಕೆ ನಾಂದಿ ಹಾಡುವಲ್ಲಿ ಹಲವಾರು ಮುಸ್ಲಿಂ ಸಾಹಿತಿಗಳು ಕೊಡುಗೆಯನ್ನು ನೀಡಿದ್ದಾರೆ. ಈ ಸಾಲಿನಲ್ಲಿ ಪ್ರಥಮ

*Please cite this article as:* ಜಯಶ್ರೀ. ಯ. ಮುಗಳಿ. (2025). ಚಂದ್ರಗಿರಿ ತೀರದಲ್ಲಿ ಕಾದಂಬರಿಯಲ್ಲಿನ ಸ್ತ್ರೀ ಸಂವೇದನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(4). ಪು.ಸಂ.* 1–6

ಮಹಿಳಾ ಪ್ರತಿನಿಧಿಯಾಗಿ ಬರೆಯಲು ತೊಡಗಿದ ಶ್ರೀಮತಿ ಸಾರಾ ಅಬೂಬಕ್ಕರ್ ಅವರು ಕಾದಂಬರಿ ಕ್ಷೇತ್ರದ ಮೂಲಕ ಅತ್ಯುತ್ತಮ ಕೊಡುಗೆಯನ್ನು ನೀಡಿದ್ದಾರೆ. 1984ರಲ್ಲಿ ಅವರ ಚಂದ್ರಗಿರಿಯ ತೀರದಲ್ಲಿ ಮೊದಲ ಕಾದಂಬರಿಯು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ವಿಶಿಷ್ಠ ಸ್ಥಾನವನ್ನು ಅಲಂಕರಿಸಿ ಸಾರಾ ಅವರನ್ನು ಪರಿಚಯಿಸಿತು.

**ಕಾದಂಬರಿಗಳು**

ಸಹಾನಾ, ವಜ್ರಗಳು, ಕದನ ವಿರಾಮ, ಸುಳಿಯಲ್ಲಿ ಸಿಕ್ಕವರು, ಪ್ರವಾಹ–ಸುಳಿ, ತಳ ಒಡೆದ ದೋಣಿ, ಪಂಜರ, ಇಳಿಜಾರು, ಕಾಣಿಕೆ ಇತ್ಯಾದಿ ಕಾದಂಬರಿಗಳನ್ನು ನೀಡಿದ್ದಾರೆ.

**ಕೃತಿಗಳು**

ಚಪ್ಪಲಿಗಳು, ಪಯಣ ಮತ್ತು ಇತರ ಕಥೆಗಳು, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಬೆಡ್ಡ ಮುಂತಾದ ಕಥಾ ಸಂಕಲನ, ಕಮರಿದ ಕನಸು, ಮಗಳು ಹುಟ್ಟಿದಳು, ತೇಲಾಡುವ ಮೋಡಗಳು, ತಾಳ, ಹೀಗೂ ಒಂದು ಬದುಕು ಮುಂತಾದ ಬಾನುಲಿ ನಾಟಕಗಳು, ಲೇಖನ ಗುಚ್ಛ, ಮನೋಭಿಮಾಲೆ, ನಾನಿನ್ನು ನಿದ್ರಿಸುವೆ ಇತ್ಯಾದಿ ಅನುವಾದಗಳನ್ನು ರಚಿಸಿದ್ದಾರೆ. **'ಐಷಾರಾಮದ ಆಳದಲ್ಲಿ'** ಎಂಬ ಪ್ರವಾಸ ಕಥನವನ್ನು ಬರೆದಿದ್ದಾರೆ. ಮನೆಮಾತು ಮಲಿಯಾಳಿ ಆದರೂ ಸಾಹಿತ್ಯ ರಚನೆ ಕನ್ನಡದಲ್ಲೇ ಆಯಿತು. ಮಲೆಯಾಳದ ಅನೇಕ ಕೃತಿಗಳನ್ನು ಡಾ. ಸಾರಾ ಕನ್ನಡಕ್ಕೆ ಅನುವಾದಿಸಿದ್ದರು.

**ಗೌರವ ಪ್ರಶಸ್ತಿಗಳು**

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಲ್ಲಿಕಾ ಪ್ರಶಸ್ತಿ, ಶ್ರೀ ಮುರುಘರಾಜೇಂದ್ರ ಮಠದ ಸಾಹಿತ್ಯ ಭೂಷಣ ಪ್ರಶಸ್ತಿ, ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ, ದಾನ ಚಿಂತಾಮಣಿ ಅತಿಮಬ್ಬೆ ಪ್ರಶಸ್ತಿ, ಕರ್ನಾಟಕ ಲೇಖಕಿಯರ ಸಂಘದ ಅನುಪಮಾ ಪ್ರಶಸ್ತಿ, ಕರ್ನಾಟಕ ಮತ್ತು ರತ್ನಮ್ಮ ಹೆಗಡೆ ಮಹಿಳಾ ಸಾಹಿತ್ಯ ಪ್ರಶಸ್ತಿ, ಕೇಂದ್ರ ಸರ್ಕಾರದ ಭಾಷಾ ಭಾರತಿ ಸಮ್ಮಾನ(2001), ಸರೋಜಾದೇವಿ ಶ್ರೀಹರ್ಷ ಪ್ರಶಸ್ತಿ, ಶಿವಾನಂದ ಪಾಟೀಲ ಪ್ರಶಸ್ತಿ, ಗೋರುರು ಪ್ರತಿಷ್ಠಾನದ ಬಾಬಾಸಾಹೇಬ ಅಂಬೇಡ್ಕರ್ ಪ್ರಶಸ್ತಿ, ಸಾವಿತ್ರಮ್ಮ ದೇ. ಜವರೇಗೌಡ ದತ್ತನಿಧಿ ಬಹುಮಾನ, ಆಶ್ವಾಸ ಸುಡಿಸಿರಿ ಪ್ರಶಸ್ತಿ, ಸಂದೇಶ ಸಾಹಿತ್ಯ ಪ್ರಶಸ್ತಿ, ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿ ನಾಶ್ಪತಿ ಪ್ರತಿಷ್ಠಾನದಿಂದ ತಿರುಮಲಾಂಬಾ ಸಾಹಿತ್ಯ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್, ಮಾಸ್ತಿ ವೆಂಕಟೇಶ ಅಯ್ಯಂಗಾರ ಸಾಹಿತ್ಯ ಪ್ರಶಸ್ತಿ, ಶಾಂತಲಾ ಪಾಟೀಲ ಸಾಹಿತ್ಯ ಪುರಸ್ಕಾರ–2014 ಸೇರಿದಂತೆ ಮುಂತಾದ ಗೌರವಗಳು ಲಭಿಸಿವೆ. ಕರಾವಳಿ ಲೇಖಕಿಯರ, ವಾಚಕಿಯರ ಸಂಘದ ಅಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿದ ಇವರು ಕರ್ನಾಟಕ ಲೇಖಕಿಯರ ಸಂಘದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಸ್ವೀಕರಿಸಿದವರು.

ಸಾರಾ ಅಬೂಬಕ್ಕರ ಅವರ ಕಥೆ, ಕಾದಂಬರಿಗಳೆಲ್ಲ ಸ್ತ್ರೀ ಸಂವೇದನೆಯ ಹತ್ತು ಹಲವಾರು ಮುಖಗಳು, ಸಮಸ್ಯೆಗಳು ವಸ್ತುನಿಷ್ಠವಾಗಿ ಚಿತ್ರಿತಗೊಂಡಿವೆ. ಡಾ. ಸಾರಾ ಅವರ ಎಲ್ಲ ಬರಹಗಳಲ್ಲಿ ಮುಸ್ಲಿಂ

ಜನಾಂಗದ ಮಹಿಳೆಯರ ನೋವಿನ ಕಥೆಗಳನ್ನು ಹೇಳುವುದರ ಮೂಲಕ ಪ್ರತಿಭಟನೆಯ ಮುಖಾಂತರ ಪುರುಷ ಸಮಾಜಕ್ಕೆ ಬುದ್ಧಿವಾದ ಹೇಳುವ ಇವರ ದಿಟ್ಟತನವನ್ನು ಕಾಣಬಹುದಾಗಿದೆ.[ರೀತಿ–ನೀತಿಗಳು, ಕಟ್ಟು–ಕಟ್ಟಲೆಗಳು ಬದುಕನ್ನು ಸರಳವಾಗಿಸಬೇಕೆ ವಿನಾ ಕ್ಲಿಷ್ಟಕರವಾಗಬಾರದು, ಸಮುದಾಯದ ರಿವಾಜುಗಳು ಅದೆಷ್ಟು ಪ್ರಬಲವಾಗಿ ಬೇರೂರಿವೆ ಅಂದರೆ ; ಅದರಿಂದ ಕಿಂಚಿತ್ತು ಕದಲಿದರೂ ಸರ್ವಶಕ್ತನಿಗೆ ವಿರುದ್ಧವಾಗಿ ನಡೆದಂತೆಯೇ ಎಂಬ ತಿಳುವಳಿಕೆಯು ಬದುಕನ್ನು ಜಟಿಲಗೊಳಿಸಿ ಬಿಡುತ್ತದೆ.

ಸಾರಾ ಅಬೂಬಕ್ಕರ ಕಾದಂಬರಿಗಳಲ್ಲಿ ಒಂದಾದ "ಚಂದ್ರಗಿರಿಯ ತೀರದಲ್ಲಿ", ಈ ಕಾದಂಬರಿಯಲ್ಲಿ ಮುಸ್ಲಿಂ ಸಮುದಾಯದ ಸ್ತ್ರೀಯರ ಮೇಲೆ ನಡೆಯುವ ಶೋಷಣೆಗಳನ್ನು ತಿಳಿಸುವ ರೀತಿ ವಿಶಿಷ್ಟ. ಮುಸ್ಲಿಂ ಸಮುದಾಯದ ಹೆಂಗಸರ ಕಷ್ಟ ಸುಖಗಳ ಬಗ್ಗೆ, ಹೆಣ್ಣು ಮಕ್ಕಳಿಗೆ ವಿದ್ಯೆಯು ಕಡ್ಡಾಯವಾಗಿ ದೊರೆಯಬೇಕು, ಅವರು ಸ್ವಾತಂತ್ರ್ಯ ಮತ್ತು ಸ್ವಾವಲಂಬಿಯಾಗಿ ಬದುಕಬೇಕೆಂದು ವಿಶೇಷ ಕಾಳಜಿಯನ್ನು ಹೊಂದಿರುವುದನ್ನು ಗುರುತಿಸುತ್ತೇವೆ. ಮುಸ್ಲಿಂ ಸಂಸ್ಕೃತಿಯ ಪ್ರಕಾರ ಗಂಡು–ಹೆಣ್ಣು ಎಷ್ಟು ಬೇಕಾದರೂ ಮದುವೆಯಾಗಬಹುದು. ಅವರಲ್ಲಿ ಮೂರು ಸಲ ತಲಾಖ್ ಹೇಳಿದ ಕ್ಷಣದಿಂದ ಗಂಡ–ಹೆಂಡತಿ ಸ್ವತಂತ್ರರೂ ಎನ್ನುವುದನ್ನು ಕಾದಂಬರಿಯ ಹಿನ್ನೆಲೆಯಲ್ಲಿ ನೋಡುತ್ತೇವೆ. ಕಾದಂಬರಿಗಳಲ್ಲಿ ಬರುವ ಮಹಮ್ಮದ ಖಾನ್–ಫಾತಿಮಾ ದಂಪತಿ ಇವರುಗಳಿಗೆ ನಾದಿರಾ–ಜಮೀಲಾ ಎಂಬ ಹೆಣ್ಣು ಮಕ್ಕಳು, ಸಮುದಾಯ, ಮತ, ಧರ್ಮ, ಜಾತಿ, ಎಲ್ಲವನ್ನು ಮೀರಿದ್ದು ದಾಂಪತ್ಯ, ದಾಂಪತ್ಯವೆಂದರೆ ಹೇಗಿರಬೇಕು ಎನ್ನುವುದನ್ನು ಕಾದಂಬರಿ ತಿಳಿಸುತ್ತದೆ. ಮುಸ್ಲಿಂ ಸಮುದಾಯದಲ್ಲಿ ಹೆಣ್ಣು ಹೆತ್ತವರ ಸಂಕಟ ಅಗೆದಷ್ಟು ಆಳವಾಗುತ್ತಲೇ ಹೋಗುತ್ತದೆ ಎನ್ನುವುದಕ್ಕೆ ಕಾರಣಗಳು ಹಲವು. ಅದರಲ್ಲಿ ವರದಕ್ಷಿಣೆಯು ಒಂದು. ತಾನು ಹೇಳಿದಂತೆಯೇ ನಡೆಯಬೇಕೆನ್ನುವ ದರ್ಪಾಭಿಲಾಷೆಯ ಮನುಷ್ಯ ಮಹಮ್ಮದಖಾನ್ ಅದಕ್ಕಾಗಿ ಆತ ಯಾವ ಮಟ್ಟಕ್ಕಾದರೂ ಹೋಗಬಲ್ಲ ರಕ್ತದ ಬಿಸಿ ಏರು ಮುಖವಾಗಿ ಚಲಿಸುವಾಗ ಈ ಬಗೆಯ ಮನಸ್ಥಿತಿಯು ಸಹಜ. ಆದರೆ ಬಿಸಿರಕ್ತ ತನ್ನದೇ ಮಗಳ ಬಾಳನ್ನು ಕೇಡಿಸುವಂತಹ ಕೆಲಸವನ್ನು ಮಾಡಬಾರದಲ್ಲ. ರಕ್ತದ ಬಿಸಿ ಇಳಿಮುಖವಾದಾಗ ತಪ್ಪಿನ ಅರಿವಾಗಲು ಕಾಲಮಿಂಚಿ ಹೋಗಿರುತ್ತದೆ. 'ಗಂಡಿನ ಅಟ್ಟಹಾಸಕ್ಕೆ ಹೆಣ್ಣಿನ ಬವಣೆಗಳು ದಟ್ಟವಾಗುವುದು ಸಮಾಜದ ಘಾತುಕತನಕ್ಕೆ ಹಿಡಿದಿರುವ ಕೈಗನ್ನಡಿ' ಎನ್ನಬಹುದು.

ಒಂದೊಮ್ಮೆ ಶಿಕ್ಷಣದ ಪರಿಚಯವೇ ಇಲ್ಲದ ಸಮುದಾಯದ ಹೆಣ್ಣು ಜೀವಗಳಿಗೆ ಮದುವೆ, ಗಂಡ, ದಾಂಪತ್ಯ ಎಂದರೆ ಏನು? ಎನ್ನುವುದರ ಕಲ್ಪನೆಯೇ ಇಲ್ಲದ ಸಮಯದಲ್ಲಿ ಕೈ ಮತ್ತು ಪಾದಗಳಿಗೆ ಮದರಂಗಿಯನ್ನು ಹಚ್ಚಿ ಆಭರಣ ತೊಡಿಸಿ ನಿಕಾಹಗೆ 'ಕಬೂಲ್' ಅನ್ನಿಸಿದ್ದರೂ ಗಂಡು ಹೆಣ್ಣಿನ ನಡುವೆ ವಯಸ್ಸಿನ ಅಂತರ ಸಾಕಷ್ಟು ಇದ್ದರೂ, ಗಂಡು ಬೇಲಿ ಹಾರುವುದನ್ನು ತಡೆಯಲು ನಿಕಾಹವನ್ನು ಮಾಡಿಸಿ ಬಿಡುತ್ತಿದ್ದರು. ಮಹಮ್ಮದಖಾನರ ತಂದೆ ಕೂಡ ಅದನ್ನೇ ಮಾಡಿದರು. ಗಂಡಿನ ಅಪೇಕ್ಷೆಗಳು ಮಾತ್ರ ಇಲ್ಲಿ ಮಹತ್ವವನ್ನು ಪಡೆಯುತ್ತಾ ಹೋಗುವುದು. ಸಮುದಾಯದ ಇತಿಹಾಸದಲ್ಲಿ ಸ್ತ್ರೀಯರಿಗೆ ವಿಶೇಷ ಪ್ರಾಶಸ್ತ್ಯವನ್ನು ಒಂದೊಮ್ಮೆ ನೀಡಲಾಗಿತ್ತು. ಯುದ್ಧ ಭೂಮಿಯಲ್ಲಿ ರಾಜಿ ತಂತ್ರದಲ್ಲಿ ಪುರುಷ ಸಮಾನವಾಗಿ ಹೋರಾಡಿದ ಚರಿತ್ರೆಯಿದೆ ಎಂದು ಸಾರಾ ಅವರು ತಮ್ಮ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಕಾಲಕ್ರಮೇಣ ಪುರುಷ ಅಹಂಕಾರ ಸ್ತ್ರೀಯನ್ನು ತುಳಿಯುತ್ತಾ ಬಂದು ಕೇವಲ ಗಂಡಿನ ಸ್ವಾರ್ಥಕ್ಕಾಗಿ ಹೆಣ್ಣಿನ ಸುತ್ತ

ಮೂಢನಂಬಿಕೆಯ ಬೇಲಿ ನೆಟ್ಟು ತನ್ನ ಅಡಿಯಾಳನ್ನಾಗಿಸಿದ್ದು ದೊಡ್ಡ ದುರಂತ ಎನ್ನುವುದು ಸಾರಾ ಅವರ ಅಭಿಪ್ರಾಯವಾಗಿದೆ.

ಮಹಮ್ಮದ ಖಾನ್ ಫಾತಿಮಾರ ದಾಂಪತ್ಯದಲ್ಲಿ ನಲಿವಾಗಲಿ, ನವಿರಾಗಲಿ ಎಳ್ಳಷ್ಟು ಇರಲಿಲ್ಲ. ಏಟುಗಳಿಂದ ಫಾತಿಮಾಳ ಬಾಯಿ ಮುಚ್ಚಿಸಿದ ಖಾನ ಸಾಹೇಬರು ಜೀವನ ಪೂರ್ತಿ ಆಕೆ ತಮ್ಮೆದುರು ಉಸಿರೆತ್ತದಂತೆ ಮಾಡಿದ್ದರು. ಈ ದಾಂಪತ್ಯದಲ್ಲಿ ಪ್ರೀತಿ ಬಿಡಿ, ಸಮಾಧಾನವನ್ನೂ ಕಾಣದೇ ತನ್ನ ಜೀವನವೇ ಇಷ್ಟು ಎಂದು ನಂಬಿ ಬಾಳುವಂತಾಯಿತು. ತಮ್ಮ ಮಕ್ಕಳೆದುರು ಗಂಡನಿಂದ ಹೊಡಿಸಿಕೊಳ್ಳುವ ಫಾತಿಮಾ ಇದನ್ನು ನೋಡಿ ತಂದೆಯನ್ನು ತಡೆಯಲಾಗದೇ ಬೆದರಿ ನಿಲ್ಲುವ ಹೆಣ್ಣು ಜೀವಗಳು ತಮ್ಮ ನೋವನ್ನು ಚಂದ್ರಗಿರಿಯ ನದಿಯ ತೀರದಲ್ಲಿ ಕುಳಿತು ಬಿಕ್ಕುವುದರ ಮೂಲಕ ಮರೆಯುತ್ತಿದ್ದರು. ಅವರ ಮನಸ್ಸಿನಲ್ಲಿ ಮದುವೆ, ಗಂಡ ಎಂದರೆ ಹೀಗೆಯೇ ಎಂಬ ಚಿತ್ರಣವು ದಟ್ಟವಾಗಿ ಬೇರೂರುತ್ತಾ ಹೋಗುತ್ತದೆ. ಮಹಮ್ಮದಖಾನ್–ಫಾತಿಮಾ ದಾಂಪತ್ಯಕ್ಕೂ ನಾದಿರಾ–ರಶೀದ್ ದಾಂಪತ್ಯಕ್ಕೂ, ಬದುಕಿನ ಕ್ರಮಕ್ಕೂ ವ್ಯತ್ಯಾಸವಿದೆ. ಖಾನ್ ಸಾಹೇಬರು ತನ್ನ ಸೇವೆಗೆಂದೆ, ಭೋಗಕ್ಕೆಂದೆ ಹೆಂಡತಿ ಫಾತಿಮಾ ಇರುವುದು ಎಂದು ನಂಬಿದ್ದರು. ಗಂಡನ ಕಾಮದ ಹಸಿವು, ಹೊಟ್ಟೆಯ ಹಸಿವು ಅಂತಾ ಇನ್ನಷ್ಟು ಹಸಿವುಗಳನ್ನು ತಣಿಸುವ ವಸ್ತು ಹೆಣ್ಣಾಗಿ ಬಿಟ್ಟಿದ್ದಾಳೆಂದು ಕಾದಂಬರಿ ತಿಳಿಸುತ್ತದೆ.

ಮದುವೆಯ ಹೊಸದರಲ್ಲಿ ನಾದಿರಾಳಿಗೆ ಗಂಡ ಎಂದರೆ ಏನೆಂಬುದನ್ನು ತನ್ನ ಅಪ್ಪನನ್ನು ನೋಡಿ ತಿಳಿದಿದ್ದ ಆಕೆಗೆ ರಶೀದ್ ಕೂಡ ಹಾಗೆಯೇ ಎಂದುಕೊಂಡಿದ್ದಳು. ಆದರೆ ಅವೆಲ್ಲವನ್ನು ಮೀರಿನಿಂತ ರಶೀದ್ ದಾಂಪತ್ಯದ ಮೊದಲ ರಾತ್ರಿಯನ್ನು ನವಿರಾಗಿಸಿದ. ಆ ಕ್ಷಣಕ್ಕೆ ನಂಬುವುದೇ ಕಷ್ಟವೆನಿಸಿದರೂ ಗಂಡನೆಂಬ ಪ್ರಾಣಿಗೆ ಕ್ರೌರ್ಯತೆಯ ಜೊತೆಗೆ ಮೋಹಿಸಲೂ ಗೊತ್ತು ಎಂದು ನಾದಿರಾ ತಿಳಿದು ಮನಸ್ಸು ಮತ್ತು ದೇಹವು ಒಂದಾಗಿ ರಶೀದನ ಎದೆಯಲ್ಲಿ ಶಾಶ್ವತವಾಗಿ ನೆಲೆಸುವಳು. ಹೀಗೆ ನಾದಿರಾಳ ಭಾವನೆಯೂ ಸಹ ತನ್ನದೇ ಭಾವನೇ ಎಂದರಿತವನು ರಶೀದ್. ಹೀಗೆ ಸಮಯದ ಜೊತೆಗೆ ಮಧುರ ದಾಂಪತ್ಯವನ್ನು ಸವಿಯುತ್ತಾರೆ. ಕಾಲಕ್ರಮೇಣ ಮಹಮ್ಮದಖಾನ್‌ರ ಸ್ವಾರ್ಥದಿಂದ ನಾದಿರಾ–ರಶೀದ ದೂರವಾಗುತ್ತಾರೆ. ಒಂದು ಮಗುವಿನ ತಾಯಿಯಾದ ಕಾರಣ ನಾದಿರಾ ತನ್ನಷ್ಟು ಅದೃಷ್ಟಶಾಲಿಯಾರು ಇಲ್ಲ ಎನ್ನುವ ಕಾಲಕ್ಕೆ ಎಲ್ಲವನ್ನು ಕಳೆದುಕೊಂಡು ಬಿಡುತ್ತಾಳೆ. ಸಂಕೋಲೆಗಳ ಒಳಗೆ ಮನುಷ್ಯ ಬದುಕುವುದೇ ಅನ್ಯರಿಗಾಗಿ ಎನ್ನುವುದನ್ನು ಮತ್ತೊಮ್ಮೆ ನಂಬುತ್ತಾ, ನಾವು ನಮಗಾಗಿ ಬಾಳದೆ ಪರಂಪರೆಗೆ ಸಂಪ್ರದಾಯಕ್ಕೆ, ರಿವಾಜುಗಳಿಗೆ, ಆಚರಣೆಗಳಿಗೆ ಕತ್ತನ್ನು ಒಡ್ಡುತ್ತಾ ನಾವು ನಾವಾಗಿಯೇ ನೋವು ಬರಮಾಡಿಕೊಳ್ಳುತ್ತೇವೆ. ಸೆಟೆದು ನಿಂತು ಕೇಳುವ ಧೈರ್ಯ ಇರುವುದಿಲ್ಲ. ಹೆಣ್ಣನ್ನು ಗಂಡು ಆ ರೀತಿ ಸರಪಳಿಯಿಂದ ಕಟ್ಟಿ ಬಂಧಿಸಿದ್ದಾನೆ. ಹೆಣ್ಣಿನ ತಾಳ್ಮೆಯು ಬಹಳ ಬಾರಿ ಪುರುಷನೆದುರು ಸೋಲುವಂತೆ ಮಾಡುತ್ತದೆ. ಮಹಮ್ಮದಖಾನ–ರಶೀದ್‌ನಂತಹವರು ಪುರುಷರ ಎರಡು ಮುಖಗಳನ್ನು ತೋರ್ಪಡಿಸುತ್ತಾರೆ. ಸಮುದಾಯವು ಹೇರುವ ರೀತಿ–ನೀತಿ–ನಿಯಮಗಳು; ಹೆರುವ ಮಡಿಲಲ್ಲಿ ಪವಡಿಸುವ ತೊಡೆಯ ಮೇಲೆ ಏರುವ ಹೆಣ್ಣಿಗೆ ಮಾತ್ರ ಎನ್ನುವುದು ವಿಪರ್ಯಾಸ.

ನಾದಿರಾಳನ್ನು ಪುನರ್ ವಿವಾಹ ಮಾಡಿಕೊಳ್ಳಲು ರಶೀದ್ ಒಪ್ಪಿಗೆ ಸೂಚಿಸಲು ಧರ್ಮ ಸಂಕಟವೊಂದು ಎದುರಾಗುತ್ತದೆ. ಮೌಲ್ವಿಗಳ ಸಹಾಯ ಪಡೆದು ಅದರ ಅರ್ಥವನ್ನು ತಿಳಿದವರು ಸಮುದಾಯವನ್ನು ಎದುರು ಹಾಕಿಕೊಳ್ಳಲು ತಯಾರಿರುವುದಿಲ್ಲ. ಅಂತೂ ಒಂದು ದಿನದ ಮಟ್ಟಿಗಾದರೂ ರಿವಾಜಿನಂತೆ ಅನ್ಯನನ್ನು ಮದುವೆಯಾಗಿ ಮರುದಿನ ಆತನಿಂದ ತಲಾಕ್ ತೆಗೆದುಕೊಂಡು ಮೂರು ತಿಂಗಳ ಬಳಿಕ ರಶೀದನನ್ನು ಮದುವೆಯಾಗುವ ತೀರ್ಮಾನಕ್ಕೆ ನಾದಿರಾ ಸೇರಿದಂತೆ ಮನೆಯವರು ಬರುತ್ತಾರೆ. ಹೆಣ್ಣಿನ ನೋವನ್ನು ಅರ್ಥ ಮಾಡಿಕೊಳ್ಳುವ ಜೀವ ಅಲ್ಲೆಲ್ಲಿಯೂ ಇರಲಿಲ್ಲ. ನಾದಿರಾ ಮನಸ್ಸು ಮಾಡಿದ್ದರೆ ಒಂದು ಒಳ್ಳೆಯ ಜೀವನ ಕಟ್ಟಿಕೊಳ್ಳಬಹುದಿತ್ತು. ಆದರೆ ಆಕೆಯ ಹೆಜ್ಜೆಗಳಿಗೆ ಅಡ್ಡಬರುತಿದ್ದ ತಂದೆಯ ಮಾತುಗಳು ಮತ್ತು ಧರ್ಮಗ್ರಂಥ ಹೀಗಿರುವಾಗಲೂ ನಾದಿರಾಳ ತಂಗಿ ಜಮೀಲಾ ಮತ್ತು ಮೀನು ಮಾರುವ ಪಾರು ಅವಳಲ್ಲಿ ಕ್ರಾಂತೀಯ ಕಿಡಿಯನ್ನು ಹೊತ್ತಿಸಿದರೂ ಅವಳು ಸಮುದಾಯದ ಕಟ್ಟಳೆಗಳನ್ನು ವಿರೋಧಿಸಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ.

ಕೊನೆಗೆ ನಾದಿರಾ ರಶೀದ್ ಮತ್ತು ಮಗುವಿನ ನೆನಪಿನಲ್ಲಿ ತನ್ನಿಷ್ಟದ ಚಂದ್ರಗಿರಿ ನದಿಯತ್ತ ಇರುವ ಮಸೀದಿಯ ಕೊಳದ ಕಡೆಗೆ ಬಂದು ತನ್ನ ಎಲ್ಲ ನೋವು ಸಂಕಟಗಳನ್ನು ಹೊತ್ತುಕೊಂಡು ಮಸೀದಿ ಕೊಳಕ್ಕೆ ಧುಮುಕುತ್ತಾಳೆ. "ಸರ್ವಶಕ್ತನ ದಯೆಯಿದ್ದರೆ ನ್ಯಾಯ ತೀರ್ಮಾನದ ದಿನ ಭೇಟಿಯಾಗೋಣ ಎನ್ನುವಳು" ಹೀಗೆ ಕಾದಂಬರಿಯಲ್ಲಿ ನಾದಿರಾ ಪಾತ್ರ ಅಂತ್ಯವಾಗುತ್ತದೆ.

ಬರೆಯುವುದಕ್ಕೆ ಬಹಳಷ್ಟು ಸರಕುಗಳನ್ನು ಇಟ್ಟುಕೊಂಡು ಮುಸ್ಲಿಂ ಸಂವೇದನೆಯನ್ನು ಸ್ತ್ರೀ ಸಂವೇದನೆಯೊಂದಿಗೆ ಮೇಳೈಸಿ ಬರೆಯುತ್ತಿರುವ ಸಾರಾ ಅವರ ಬರವಣಿಗೆಯನ್ನು ಬಹಳಷ್ಟು ಮುಸ್ಲಿಂ ಹೆಣ್ಣು ಮಕ್ಕಳು ತಮ್ಮ ಸಾಮಾಜಿಕ, ಸಾಂಪ್ರದಾಯಿಕ, ನಿಯಮ, ನಿಬಂಧನೆಗಳಿಗೆ ಸಿಕ್ಕು ಬಿಡುಗಡೆಗೊಳ್ಳಲಾರದೆ ನರಳುವ ಸ್ಥಿತಿಗೆ ಮೀಸಲಿಸಿದ್ದಾರೆ. ವಿದೇಶಿ ವ್ಯಾಮೋಹ ಗಂಡನನ್ನು ಕಟ್ಟಿಕೊಂಡು ಜೀವನಪರ್ಯಂತ ಕೊರಗುವ ಮುಸ್ಲಿಂ ಹೆಣ್ಣು ಮಕ್ಕಳ ಮಾನಸಿಕ ಪರದಾಟವನ್ನು ಚಿತ್ರಿಸುವ ಸಾರಾ, ಆ ಸಮಾಜದ ಎಲ್ಲ ಅವೈಜ್ಞಾನಿಕ ವಿಚಾರಗಳನ್ನು ತಮ್ಮ "ಚಂದ್ರಗಿರಿ ತೀರದಲ್ಲಿ" ಎಂಬ ಕಾದಂಬರಿ ಮೂಲಕ ಪ್ರಕಟಿಸಿದ್ದಾರೆ.

**ಉಪಸಂಹಾರ**

ಸಮುದಾಯದ ನಿಯಮಗಳು ಮನುಷ್ಯ ಸ್ನೇಹಿಯಾಗಿ ಹೆಣ್ಣಿಗೆ ಸ್ವಾತಂತ್ರ್ಯ ನೀಡುವ ದಿನಗಳು ಬರಲಿ ಎಂದು ಹೇಳುತ್ತಾ ಮುಸ್ಲಿಂ ಸಮಾಜದಲ್ಲಿ ಮತ್ತು ಇತರ ಸಮಾಜಗಳಲ್ಲಿ ಕೂಡಾ ಹರಡಿರುವ ಹಲವಾರು ಮೂಢನಂಬಿಕೆಗಳಿಂದಾಗಿ ಮಹಿಳೆಯರು ಶೋಷಣೆಗೊಳಗಾಗುತ್ತಿರುವುದನ್ನು ನಾವು ನೋಡುತ್ತಲೇ ಇದ್ದೇವೆ. ಇಂತಹ ಶೋಷಣೆಗಳ ವಿರುದ್ಧ ಆಯಾ ಸಮಾಜದ ಮಹಿಳೆಯರು ಒಟ್ಟಾಗಿ ಧ್ವನಿ ಎತ್ತಬೇಕು. ಇಂದು ಎಲ್ಲ ದುರಂತಕ್ಕೂ ಹೆಣ್ಣನ್ನೇ ಗುರಿ ಮಾಡುವ ಪುರುಷ ಪ್ರಧಾನ ಸಮಾಜ, ಧರ್ಮ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯರನ್ನು ಮತ್ತಷ್ಟು ಮೂಲೆಗೊತ್ತರಿಸುತ್ತಿವೆ. ಈ ಕುರಿತು ಮಹಿಳೆಯರು ಜಾಗೃತರಾಗಬೇಕು. ಆಗ ಮಾತ್ರ ಸಮಾಜದಿಂದ ಇಂತಹ ಪಿಡುಗುಗಳನ್ನು ದೂರವಾಗಿಸಲು ಸಾಧ್ಯ. ಧ್ವನಿಯೇ ಇಲ್ಲದ ಗಂಡಸರ ಕೈಗೊಂಬೆಗಳಾದ ನಮ್ಮ ಮಹಿಳೆಯರು ಈವರೆಗೆ ಇಂತಹ ವಾದವನ್ನು

ಮುಂದೊಡ್ಡಿಲ್ಲ. ಆದರೆ ಈ ಇಪ್ಪತ್ತನೆಯ ಶತಮಾನದಲ್ಲಿ ನಾವು ಮೂರ್ಖರಂತೆ ವರ್ತಿಸುವುದನ್ನು ಬಿಟ್ಟು ಈ ದೆಸೆಯಲ್ಲಿ ಯೋಚಿಸಿ ಇಂತಹ ಒಂದು ಪ್ರಯತ್ನ ಮಾಡಿದರೆ ಎಷ್ಟೋ ಮುರಿದ ಮದುವೆಗಳು ಯಾವ ತಡೆಯೂ ಇಲ್ಲದೆ ಪುನಃ ಕೂಡಿಕೊಳ್ಳಲೂ ಸಾಧ್ಯವಾಗಬಹುದು. ಇಂತಹ ಸುಧಾರಣೆಗಳು ಆಗಬೇಕಾದರೆ ಸಮಾಜದ ಸ್ತ್ರೀ ಪುರುಷರೆಲ್ಲರೂ ವಿದ್ಯಾವಂತರಾಗಬೇಕು. ಧರ್ಮ ಗ್ರಂಥಗಳ ಕುರಿತು ಸಮನಾದ ಅಧ್ಯಯನ ಮತ್ತು ಸಂಶೋಧನೆ ನಡೆಯಬೇಕು. ಇಂದಿನ ಸಮಾಜಕ್ಕೆ ಒಪ್ಪುವ ರೀತಿಯಲ್ಲಿ ಕ್ರೂರ ನಿಯಮಗಳನ್ನು ಪರಿಷ್ಕರಿಸುವ ಒಂದು ಯೋಜನೆ ಅತ್ಯಗತ್ಯವಾಗಿ ಆಗಲೇಬೇಕಾಗಿದೆ. ಇದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬ ಅಂಶವನ್ನು ಸ್ತ್ರೀ ಅರಿಯಬೇಕಾಗಿರುವುದು ಕಾಲದ ಬೇಡಿಕೆಯಾಗಿದೆ ಎಂಬುದು ಸಾರಾ ಅವರು ತಮ್ಮ ಬರವಣಿಗೆಯಲ್ಲಿ ಆಶಿಸುತ್ತಾರೆ.

**ಆಕರ ಗ್ರಂಥ**

- ಸಾರಾ ಅಬೂಬಕ್ಕರ್ (2017). *ಚಂದ್ರಗಿರಿ ತೀರದಲ್ಲಿ (12ನೇ ಮುದ್ರಣ).* ಚಂದ್ರಗಿರಿ ಪ್ರಕಾಶನ, ಮಂಗಳೂರು.

**ಪರಾಮರ್ಶನ ಗ್ರಂಥಗಳು**

- ರಾಜಪ್ಪ ದಳವಾಯಿ. (2018). *ಕನ್ನಡ ಸಾಹಿತ್ಯ ಕೋಶ (ಒಂಬತ್ತನೇ ಪರಿಷ್ಕೃತ ಮುದ್ರಣ).* ಡಾ. ರಾಜಪ್ಪ ದಳವಾಯಿ ತರಬೇತಿ ಕೇಂದ್ರ, ತುಮಕೂರು.
- ಸಂತೋಷ ಅನಂತಪುರ (2013). *ಅನಂತಯಾನ ಅಂಕಣ.* ವಸಂತ ಪ್ರಕಾಶನ, ಬೆಂಗಳೂರು.